3. ವಿಷಯ: ಸಹಕಾರಿ ವಸತಿ ಮಹಾಮಂಡಲದ ಚುನಾವಣೆ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):– ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನಾನು ಈ ರಾಜ್ಯ ಮಟ್ಟದ ಸಹಕಾರಿ ವಸತಿ ಮಹಾಮಂಡಲ ಏನಿದೆ, ಮಾನ್ಯ ಸಹಕಾರಿ ಸಚಿವರಿಗೆ ಪತ್ರ ಕೊಟ್ಟು ಹೇಳಿದ್ದೇನೆ. ಉತ್ತರ ಈಗ ಬಂದಿದೆ, ನೋಡುವುದಕ್ಕೆ ಆಗಿಲ್ಲ. ಆದರೆ, ಸಹಕಾರಿ ವಸತಿ ಮಹಾಮಂಡಲದ ಚುನಾವಣೆ ಜುಲೈ 19ನೇ ತಾರೀಖಿಗೆ ಇದೆ ಎಂದು ಸುದ್ದಿ ಬಂದಿದೆ. ಸದಸ್ಯರ ಪಟ್ಟಿಯನ್ನು ನ್ಯಾಯಯುತವಾಗಿ ಹೈಕೋರ್ಟಿನ ನಿರ್ದೇಶನದಂತೆ ಸಿದ್ಧತೆ ಆಗುತ್ತಿಲ್ಲವೆಂದು ಆರೋಪವಿದೆ. ಇಲ್ಲಿ ಅರ್ಹ ಸದಸ್ಯರನ್ನು ಕೈಬಿಟ್ಟು ಅಕ್ರಮವಾಗಿ ಬೇರೆ ಬೇರೆ ಸದಸ್ಯರ ಸೇರ್ಪಡೆ ಮಾಡಿ, ಇದೊಂದು ನಿಯಮಬಾಹಿರವಾಗಿ ಆಗುತ್ತಿದ್ದು, ಪಾರದರ್ಶಕವಾಗಿ ಆಗತ್ತಿಲ್ಲ ಎನ್ನುವ ದೂರು ಬಂದಿದೆ. ಹಾಗಾಗಿ, ಹೈ ಕೋರ್ಟ್ direction ಪ್ರಕಾರ voter list ready ಮಾಡಬೇಕು. ಅದನ್ನು ಸರಿಯಾಗಿ ಮಾಡುತ್ತಿಲ್ಲವೆನ್ನುವ ಆರೋಪ ಏನಿದೆಯೋ, ಇದಕ್ಕೆ ಚುನಾವಣಾ ಆಯೋಗ ಏನು ಮಾಡಬೇಕಾಗಿದೆ, ಇದರ ಜೊತೆಗೆ ಸರ್ಕಾರ intervene ಆಗಲೇ ಬೇಕು. ಚುನಾವಣಾ ಆಯೋಗದವರು ಸಹ ಹೇಗೆ ಬೇಕಂದರೆ ಹಾಗೆ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಸರ್ಕಾರದ ಎಲ್ಲಾ ಅಂಕಿ–ಸಂಖ್ಯೆ ದಾಖಲೆಗಳನ್ನೇ ಆಧರಿಸಿ ಚುನಾವಣಾ ಆಯೋಗವು voter listನ್ನು ಮಾಡಬೇಕಾಗುತ್ತದೆ. ಹಾಗಾಗಿ, ಅವರು ತಪ್ಪಾಗಿ voter listನ್ನು ಸಿದ್ಧಪಡಿಸುತ್ತಿದ್ದರೆ ರಾಜ್ಯ ಸರ್ಕಾರ ಸುಮ್ಮನೆ ಚುನಾವಣಾ ಆಯೋಗ ಮಾಡುತ್ತದೆ ಎಂದು ಕುಳಿತುಕೊಳ್ಳದೆ, ನೀವೂ ಸಹ ನಿಮ್ಮ ಜವಾಬ್ದಾರಿಯನ್ನು ಚುನಾವಣಾ ಆಯೋಗದ ಜೊತೆ ಮಾತುಕತೆ ಮಾಡಿ ಅರ್ಹ ಮತದಾರರ ಸೇರ್ಪಡೆ ಆಗುವಂತೆ ಮಾಡಬೇಕು. Voter listಸಿಗುತ್ತಿಲ್ಲ, Voter list ಸಹ ಸಿಗುವಂತೆ ಆಗಬೆಕು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು):– ಮಾನ್ಯ ಅಧ್ಯಕ್ಷರೆ,

01) ಸಹಕಾರ ಸಂಘಗಳ ಚುನಾವಣೆಯು ಪಾರದರ್ಶಕವಾಗಿ ನಡೆಯುವ ದೃಷ್ಟಿಯಿಂದ ಕರ್ನಾಟಕ ಸರಕಾರವು ಚುನಾವಣಾ ಆಯೋಗವನ್ನು ರಚಿಸಲಾಗಿರುತ್ತದೆ. ಸಹಕಾರ ಚುನಾವಣಾ ಆಯೋಗವು ಒಂದು ಸ್ವತಂತ್ರ ಸಂಸ್ಥೆಯಾಗಿದ್ದು, ಎಲ್ಲಾ ಸಹಕಾರ ಸಂಘಗಳ ಚುನಾವಣೆಗಳನ್ನು ಪಾರದರ್ಶಕವಾಗಿ ನಡೆಸುವ ಕರ್ತವ್ಯ ಚುನಾವಣಾ ಆಯೋಗದ್ದಾಗಿರುತ್ತದೆ. ಅದರೂ, ಚುನಾವಣಾ ಆಯೋಗವು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ವಿವರಣೆಯನ್ನು ನೀಡಿರುತ್ತದೆ.

02) ರಾಜ್ಯಮಟ್ಟದ ಸಹಕಾರಿ ಅಪೆಕ್ಸ್ ಸಂಘಗಳಿಗೆ ಚುನಾವಣೆಯನ್ನು ನಡೆಸಲು ಅಧಿಕೃತ ಜ್ಞಾಪನ ಪತ್ರವನ್ನು ಸಹಕಾರ ಚುನಾವಣಾ ಆಯೋಗ ದಿ:16–1–2014 ರಂದು ಪ್ರಕಟಿಸಿರುತ್ತದೆ. ಅದರಂತೆ, ಆಯೋಗವು ದಿ:28–6–2014 ರಿಂದ 30–6–2014 ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆಯನ್ನು ನಡೆಸಲು ನಿರ್ದೇಶಿಸಲಾಗಿದೆ. ನಂತರ, ಗೌರವ ಉಚ್ಚ ನ್ಯಾಯಾಲಯದ ಪೂರ್ಣಪೀಠವು ರಿಟ್ ಅಪೀಲು ಸಂ:734/2014 ಮತ್ತು ಇತರೆ ಸಂಬಂಧಿತ ರಿಟ್ ಅಪೀಲುಗಳಲ್ಲಿ ದಿ:30–4–2014 ರಂದು ನೀಡಿದ ಆದೇಶವನ್ನು ಗಮನದಲ್ಲಿಟ್ಟುಕೊಂಡು ಚುನಾವಣಾ ದಿನಾಂಕಗಳನ್ನು ಪರಿಷ್ಕರಿಸಿ, ಪರಿಷ್ಕೃತ ಅಧಿಸೂಚನೆಯನ್ನು ದಿ:20–5–2014 ರಂದು ಹೊರಡಿಸಲಾಗಿದೆ. ಅದರಂತೆ, ರಾಜ್ಯಮಟ್ಟದ ವಸತಿ ಮಹಾಮಂಡಳದ ಚುನಾವಣೆಯನ್ನು ದಿ:19–7–2014 ರಿಂದ 21–7–2014 ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸಲು ಸೂಚಿಸಲಾಗಿದೆ. ಆಯೋಗದ ಈ ಅಧಿಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ ಚುನಾವಣಾಧಿಕಾರಿಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 (ಸಂಕ್ಷಿಪ್ತವಾಗಿ "ನಿಯಮ") ರ ನಿಯಮ 14(1) ರನ್ವಯ ನಮೂನೆ – XI ರಲ್ಲಿ ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಚುನಾವಣೆಯನ್ನು ದಿ:19–7–2014 ರಂದು ನಿಗದಿಪಡಿಸಿ ಅಧಿಸೂಚನೆ ಹೊರಡಿಸಿರುತ್ತಾರೆ.

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದಿಂದ ಸ್ವೀಕರಿಸಲಾದ ಕರಡು ಮತದಾರರ ಪಟ್ಟಿಯನ್ನು ಆಧರಿಸಿ ನಿಯಮ 13ಡಿ(3) ರನ್ವಯ ಜಿಲ್ಲಾ ಚುನಾವಣಾಧಿಕಾರಿಗಳು ಕರಡು ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ 45 ದಿನಗಳಿಗೆ ಮುಂಚಿತವಾಗಿ ಅಂದರೆ ದಿ:– 2–6–2014 ರಂದು ಜಿಲ್ಲಾ ಚುನಾವಣಾಧಿಕಾರಿಗಳ ಹಾಗೂ ವಸತಿ ಮಹಾಮಂಡಳದ ಸೂಚನಾ ಫಲಕದಲ್ಲಿ ಪ್ರಕಟಿಸಿರುತ್ತಾರೆ ಮತ್ತು ಈ ಸಂಬಂಧವಾಗಿ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಲ್ಲಿಸಲು ಅವಕಾಶ ನೀಡಲಾಗಿದೆ ಹಾಗೂ ಮಹಾಮಂಡಳದ ಆಡಳಿತ ಮಂಡಳಿ ಚುನಾವಣೆ ಸಂಬಂಧ ನೇಮಿಸಲಾದ ರಿಟರ್ನಿಂಗ್ ಆಫೀಸರ್‌ರವರು ಚುನಾವಣಾ ದಿನಾಂಕಕ್ಕೆ 15 ದಿನಗಳ ಮುಂಚಿತವಾಗಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ. ಅಲ್ಲದೇ, ಈಗಲೂ ಸಹ ಮತದಾರರ ಪಟ್ಟಿ ಕುರಿತಂತೆ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಪ್ರಾಂತೀಯ ಆಯುಕ್ತರಿಗೆ ಸಲ್ಲಿಸಲು ಅವಕಾಶವಿರುತ್ತದೆ. ಆದರೆ, ಇದುವರೆವಿಗೆ ಯಾವುದೇ ದೂರು ಮತ್ತು ಆಕ್ಷೇಪಣೆಗಳು ಆಯೋಗದ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ಪ್ರಾಂತೀಯ ಆಯುಕ್ತರು ಮತ್ತು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಆಕ್ಷೇಪಣೆ ಸಲ್ಲಿಸಲು ಇನ್ನೂ ಕಾಲಾವಕಾಶ ಇರುತ್ತದೆ. ಯಾವುದೇ ಆಕ್ಷೇಪಣೆಗಳು ಮತ್ತು ದೂರುಗಳು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಬಂದಲ್ಲಿ ಅವುಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ 15 ದಿನಗಳ ಮುಂಚಿತವಾಗಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಚುನಾವಣೆಯು ನ್ಯಾಯಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಬಗ್ಗೆ ಆಯೋಗವು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಚುನಾವಣಾಧಿಕಾರಿಗಳನ್ನು ಸಕಾರಣಗಳಿಲ್ಲದೆಯೇ ಬದಲಾವಣೆ ಮಾಡುವುದು ಸೂಕ್ತವಲ್ಲವೆಂದು ಮತ್ತು ಚುನಾವಣಾ ದಿನಾಂಕವನ್ನು ಮತ್ತೊಮ್ಮೆ ಮರುನಿಗದಿಪಡಿಸುವ ಅವಶ್ಯಕತೆ ಇರುವುದಿಲ್ಲವೆಂದು ಚುನಾವಣಾ ಆಯೋಗವು ಅಭಿಪ್ರಾಯಪಟ್ಟಿರುತ್ತದೆ.

ಅಲ್ಲದೆ ಮೇಲೆ ತಿಳಿಸಿದಂತೆ ಈಗಾಗಲೇ ಒಮ್ಮೆ ಚುನಾವಣಾ ದಿನಾಂಕವನ್ನು ಪರಿಷ್ಕರಿಸಿರುತ್ತಾರೆ.

ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸುವುದಕ್ಕೆ ಸಹಕಾರಿ ಚುನಾವಣಾ ಆಯೋಗವನ್ನು ಕಾಯಿದೆ ಪ್ರಕಾರ ರಚನೆ ಮಾಡಲಾಗಿದೆ. ಯಾವುದೇ ಸಹಕಾರಿ ಸಂಸ್ಥೆ ತನ್ನ ಅವಧಿ ಮುಗಿದ ತರುವಾಯ ಚುನಾವಣಾ ಪ್ರಕ್ರಿಯೆ ಮಾಡುವಂಥ ಪೂರ್ಣ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ. ಅದರಡಿಯಲ್ಲಿ ಮತದಾರರ ಪಟ್ಟಿಯನ್ನು ತಯಾರು ಮಾಡುವುದು, ಚುನಾವಣಾ ಅಧಿಕಾರಿಯನ್ನು ನೇಮಕ ಮಾಡುವುದು ಮತ್ತು ಚುನಾವಣೆ ನಡೆಸುವಂಥದ್ದು, ಇಷ್ಟು ಅಧಿಕಾರ ಆಯೋಗದ ವ್ಯಾಪ್ತಿಯಲ್ಲಿದೆ. ಹಾಗಾಗಿ, ವಸತಿ ಸಹಕಾರಿ ಮಹಾಮಂಡಲ ಏನಿದೆ, ಇದಕ್ಕೆ 19ರಿಂದ 30ರವರೆಗೆ ದಿ:19.07.2014ರಿಂದ 21.07.2014ರ ಅವಧಿಯಲ್ಲಿ ಯಾವತ್ತು ಸೂಕ್ತವಾಗುತ್ತದೆಯೋ ಅಂದು ಚುನಾವಣೆ ಮಾಡುವುದಕ್ಕೆ Regional Commissioner ನವರನ್ನು ಚುನಾವಣಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದಾರೆ. 45 ದಿವಸಕ್ಕೆ ಮುಂಚೆ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕೆಂದು ನಿಯಮವಿದೆ. ಏನಾದರೂ ದೂರುಗಳಿದ್ದರೆ ತಾವು ಸಂಬಂಧಪಟ್ಟ ಚುನಾವಣಾಧಿಕಾರಿಗಳಿಗೆ ಸಲ್ಲಿಸಿದರೆ ಅವರು ಅದರ ಬಗ್ಗೆ ಕ್ರಮ ತೆಗೆದುಕೊಂಡು, ಏನಾದರೂ ಲೋಪದೋಷಗಳಿದ್ದರೆ ಅದನನು ಸರಿಪಟಿಸಿ ಮತದಾರರ ಪಟ್ಟಿಯನ್ನು ಪ್ರಕಟಿಸುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– Voter list ಸಿಗುವಂತೆ ಮಾಡಬೇಕಲ್ಲ.

ಅಧ್ಯಕ್ಷರು:– ಆಯಿತು, voter list ಸಿಗುವಂತೆ ಮಾಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– Voter list ಸಿಗುತ್ತದೆ, ಸಿಗುವಂತೆ ಕ್ರಮ ತೆಗೆದುಕೊಳ್ಳುತ್ತೇವೆ. ಸೂಚನೆ ಕೊಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, voter listನ್ನಾದರೂ ಕೊಡಿಸಿ.

ಅಧ್ಯಕ್ಷರು:– ಕೊಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಈಗ ಚುನವಣಾ ಆಯೋಗದ ವ್ಯಾಪ್ತಿಯಲ್ಲಿರುವಂಥದ್ದಕ್ಕೆ ನಾವು ನೇರ ಹಸ್ತಕ್ಷೇಪ ಮಾಡಬಾರದೆನ್ನುವ ಕಾರಣಕ್ಕೆ ಹೇಳಿಲ್ಲ. ತಾವು ಈ ಸದನದ ಮೂಲಕ ಗಮನಕ್ಕೆ ತಂದಿದ್ದೀರಿ. ಅದನ್ನು ಚುನಾವಣಾ ಆಯೋಗದ ಗಮನಕ್ಕೆ ತಂದು ಪ್ರಕಟಿಸುವ ವ್ಯವಸ್ಥೆ ಮಾಡಿಸುತ್ತೇವೆ.

ಅಧ್ಯಕ್ಷರು:– Voter listಸಿಗುವಂತೆ ಮಾಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾಡುತ್ತೇವೆ.

4. ವಿಷಯ: ದಾವಣಗೆರೆ–ಚನ್ನಗಿರಿ–ಅಜ್ಜಂಪುರ–ಬೀರೂರು ರಸ್ತೆಯ ದುರಸ್ತಿ ಬಗ್ಗೆ.

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):– ಮಾನ್ಯ ಅಧ್ಯಕ್ಷರೆ, ನಾನು ಲೋಕೋಪಯೋಗಿ ಸಚಿವರ ಗಮನಕ್ಕೆ ತರುತ್ತಿದ್ದೇನೆ. ದಾವಣಗೆರೆ–ಚನ್ನಗಿರಿ–ಅಜ್ಜಂಪುರ–ಬೀರೂರು ರಸ್ತೆ ಇದರ ಹಣೆಬರಹ ಏನು ಎಂದು ತಮಗೆ ಗೊತ್ತಿದೆ. ಕೆ–ಶಿಪ್‌ಗೆ ಕೊಟ್ಟಿದ್ದೇವೆಂದು ನೀವೇ ಉತ್ತರದಲ್ಲಿ ಕೊಟ್ಟಿದ್ದೀರಿ. ಅದರಿಂದ Gammon Indian Company ಯವರಿಗೆ ಕೊಟ್ಟು ಇವತ್ತಿನವರೆಗೆ ಸುಮಾರು 20 ವರ್ಷ ಆ ರಸ್ತೆ ಅದೇ ರೀತಿಯಲ್ಲೇ ಬಿದ್ದಿದೆ. 5% work ಮಾಡಿದ್ದಾರೆ. ಅವನು ಎಲ್ಲಿದ್ದಾನೆ, ಆ ಏಜೆನ್ಸಿ ಏನಾಗಿದೆಯೆಂದು ನಿಮ್ಮ ಇಲಾಖೆಗೆ ಗೊತ್ತಿಲ್ಲ. ಇವತ್ತೇ ನೀವು ಆ Gammon India Company Limited ಗೆ ಕೊಟ್ಟಿರುವ ಕಾಂಟ್ರ್ಯಾಕ್ಟ್‌ನ್ನು ಕ್ಯಾನ್ಸಲ್ ಮಾಡಿ ಹೊಸ ಟೆಂಡರ್ ಕರೆಯಬೇಕು. ಇನ್ನೂ ಕೂಡಾ ನೋಡಿಕೊಂಡು ಕುಳಿತುಕೊಳ್ಳುವುದರಲ್ಲಿ ಅರ್ಥವಿಲ್ಲ. ಆ Gammon India Company Limited ಗೆ ಕೊಟ್ಟಿರುವ ಗುತ್ತಿಗೆಯನ್ನು ಇಂದೇ ರದ್ದು ಮಾಡುತ್ತೇನೆಂದು ಹೇಳಬೇಕು. ಅದನ್ನು cancel